**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :19.10.2024**

**ಮುಂದುವರೆದ ಪಾಟೀ ಸವಾಲು - 1 ನೇ ಪ್ರತಿವಾದಿಯ ವಾರಸುದಾರರ ಪರ ವಕೀಲರಿಂದ :**

ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನಮ್ಮ ದೊಡ್ಡಮ್ಮ ಲಕ್ಷ್ಮಮ್ಮರವರು ಭಾಗ ಕೇಳಿ ಅಸಲು ದಾವ ಸಂಖ್ಯೆ 385/2008 ನ್ನು ದಾಖಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಮ್ಮ ತಾಯಿ ಜೀವಂತ ಇದ್ದು, ಅವರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ನಮ್ಮ ತಾಯಿ ಹಾಗೂ ಸಹೋದರಿಯರು ಅವರ ಸಹೋದರ ಮುನಿಕೆಂಪಯ್ಯರವರ ಜೊತೆ ರಾಜೀ ಮಾಡಿಕೊಂಡಿದ್ದಾರೆಂದರೆ ಗೊತ್ತಿಲ್ಲ. ಆ ಬಗ್ಗೆ ನಮ್ಮ ತಾಯಿಗೆ ಗೊತ್ತಿರಬಹುದೇನೋ ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ಕೆ.ಎ.ಐ.ಡಿ ಬಿ ರವರು ಈ ಮೇಲಿನ ದಾವೆ ನಡೆಯುವಾಗ ಭೂ ಸ್ವಾದೀನ ಮಾಡಿಕೊಂಡಿದ್ದಾರೆಂದರೆ ಗೊತ್ತಿಲ್ಲ. ನಮ್ಮ ತಾಯಿಯನ್ನು ಬಿಟ್ಟು ಅವರ ಸಹೋದರ ಮತ್ತು ಸಹೋದರಿಯರು ಪರಸ್ಪರ ಹೊಂದಾಣಿಕೆ ಇದ್ದರು. ನಮ್ಮ ತಾಯಿ ಮತ್ತು ಅವರ ಸಹೋದರ ಮುನಿಕೆಂಪಣ್ಣ ಪರಸ್ಪರ ಚೆನ್ನಾಗಿದ್ದರು. ಹಾಗೆ ಪರಸ್ಪರ ಚೆನ್ನಾಗಿದ್ದಾಗ ಅಸಲು ದಾವ ಸಂಖ್ಯೆ 385/2008 ರಲ್ಲಿ ರಾಜೀ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 41 ಲಕ್ಷ ರೂಪಾಯಿಗಳನ್ನು ಲಕ್ಷ್ಮಮ್ಮರವರಿಗೆ ನೀಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ಮತ್ತು ಅವರ ಉಳಿದ 3 ಸಹೋದರಿಯರಿಗೆ ತಲಾ 10 ಲಕ್ಷ ರೂಪಾಯಿಗಳನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಲಕ್ಷ್ಮಮ್ಮರವರಿಗೆ ಒಂದು ಜಮೀನು ಅವರು ಹೆಸರಿನಲ್ಲಿ ಮಂಜೂರು ಆಗಿದ್ದರಿಂದ ಅವರಿಗೆ 31 ಲಕ್ಷ ರೂಪಾಯಿ ಹೆಚ್ಚಿನ ಹಣ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿಗೆ ಮೊದಲು ಚೆಕ್ ಮುಖಾಂತರ ಹಣ ನೀಡಿದ್ದು, ಅವರು ಚೆಕ್ ಬೇಡ ಎಂದು ಹೇಳಿ ನಗದ ರೂಪದಲ್ಲಿ ಹಣ ಪಡೆದಿರುತ್ತಾರೆಂದರೆ ಸರಿಯಲ್ಲ. ನಮ್ಮ ತಾಯಿಗೆ ಚೆಕ್ ಸಂಖ್ಯೆ 123635 ಮೂಲಕ ಹಣ ನೀಡಿದ್ದು, ನಂತರ ಅವರು ವಾಪಸ್ಸು ಕೊಟ್ಟು ನಗದು ರೂಪದಲ್ಲಿ ಹಣ ಪಡೆದಿರುತ್ತಾರೆಂದರೆ ಸರಿಯಲ್ಲ. ಹಣ ಪಡೆದು ಹಕ್ಕು ಬಿಡುಗಡೆ ಪತ್ರ ಬರೆದು ಕೊಡುತ್ತೇವೆಂದು ಹೇಳಿ ನಾನು, ನನ್ನ ತಾಯಿ ಮತ್ತು ಇನ್ನೊಬ್ಬರು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 3 ನೇ ಪ್ರತಿವಾದಿ ಹಣ ಪಡೆದು ದಿನಾಂಕ 20.02.2009 ರಂದು ಹಕ್ಕು ಬಿಡುಗಡೆ ಬರೆದು ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾವು ಹಕ್ಕು ಬಿಡುಗಡೆ ಪತ್ರ ಮಾಡಿಕೊಡುತ್ತೇವೆ ಎಂದು ಸಮಯ ವಿಳಂಬ ಮಾಡಿದ್ದು, ನಂತರ ಮಾಡಿ ಕೊಟ್ಟಿರುವುದಿಲ್ಲ ಎಂದರೆ ಹಣವನ್ನು ಪಡೆಯದೇ ಇದ್ದಾಗ ಹಕ್ಕು ಬಿಡುಗಡೆ ಪತ್ರ

ಮಾಡಿಕೊಡುವ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತೇನೆ. ನಮ್ಮ ತಾಯಿ ಸದರಿ ದಾವೆಯನ್ನು ಏಕೆ ಮುಂದುವರೆಸಿರುವುದಿಲ್ಲ ಎಂದು ನನಗೆ ಹೇಳಿರುವುದಿಲ್ಲ. ನನ್ನ ತಾಯಿ ಹಾಗೂ ಪಾರ್ವತಮ್ಮ ಇನ್ನು ಹೆಚ್ಚಿನ ಹಣ ಪಡೆಯಲು ಈ ಹಿಂದಿನ ದಾವೆಯನ್ನು ವಾಪಸ್ಸು ಪಡೆದ ನಂತರ ಪುನಃ ಈ ದಾವೆಯನ್ನು ಹಾಕಿರುತ್ತಾರೆಂದರೆ ಸರಿಯಲ್ಲ. ಮುನಿಕೆಂಪಮ್ಮ ಮತ್ತು 2 ನೇ ಪ್ರತಿವಾದಿ 2008 ರಲ್ಲಿ ವಿಭಾಗ ಪತ್ರ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ನನ್ನ ಪ್ರಕಾರ ಯಾವುದೇ ವಿಭಾಗ ಪತ್ರ ಮಾಡಿಕೊಂಡಿರುವುದಿಲ್ಲ. ಈಗ ದಾವ ಸ್ವತ್ತಿನ ಖಾತೆ ಪಹಣಿ ಮುನಿಕೆಂಪಯ್ಯ ಹೆಸರಿನಲ್ಲಿ ಬರುತ್ತಿದೆ. ಕೆಲವು ಆಸ್ತಿಗಳು ಮುನಿಕೆಂಪಯ್ಯರವರ ಪತ್ನಿ ಮತ್ತು ಮಕ್ಕಳ ಹೆಸರಿನಲ್ಲಿ ಬರುತ್ತಿದೆ ಎಂದರೆ ಈ ದಾವೆ ಹಾಕಿದ ನಂತರ ಬರುತ್ತಿವೆ ಎಂದಿದ್ದಾರೆ. ನಾವು ದಾವ ಸ್ವತ್ತುಗಳಲ್ಲಿ ನಮ್ಮ ಹಿಸ್ಸೆಗೆ ಬರಬೇಕಾಗದ ಭಾಗವನ್ನು ನಗದು ರೂಪದಲ್ಲಿ ಪಡೆದುಕೊಂಡಿದ್ದು, ನಮಗೆ ಯಾವುದೇ ಭಾಗ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಮರಣ ಹೊಂದಿದ ನಂತರ ಉದೇಶ ಪೂರಕವಾಗಿ ಮುನಿಕೆಂಪಯ್ಯರವರ ಸ್ವಂತ ಆಸ್ತಿಯಲ್ಲಿ ಭಾಗ ಪಡೆಯಲು ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**